ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಳ್ಳಾರಿ.
OFFICE OF THE DEPUTY DIRECTOR, WOMEN AND CHILD DEVELOPMENT DEPARTMENT, BELLARY – 583102
Telephone : 08392-266219. Email : dwcdbellary@gmail.com

ಸಂಖ್ಯೆ : ಉನಿಬ/ಮಮಅಇ/ಶಾಪೂಶಿಬಕಾ/2018–19 ದಿನಾಂಕ : 08.07.2019

## ಉಚಿತ ಪತ್ರಿಕಾ ಪ್ರಕಟಣೆ

ಹೈದ್ರಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯ ಬಳ್ಳಾರಿ ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ ಶಾಲಾ ಪೂರ್ವ ಶಿಕ್ಷಣ ಬಲವರ್ಧನೆ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಮೇಲುಸ್ತುವಾರಿ ಮಾಡಲು ಒಬ್ಬ ಜಿಲ್ಲಾ ಸಂಪನ್ಮೂಲ ವ್ಯಕ್ತಿಯನ್ನು ವೈಯಕ್ತಿಕ ಸಮಲೋಚಕರೆಂದು ಗೌರವಧನ ಆಧಾರದ ಮೇಲೆ ತಾತ್ಕಾಲಿಕವಾಗಿ ಆಯ್ಕೆ ಮಾಡುವ ಕುರಿತು.

### ಜಿಲ್ಲಾ ಸಂಪನ್ಮೂಲ ವ್ಯಕ್ತಿಯ ಅರ್ಹತೆಗಳು :

1. ಅರ್ಜಿ ಸಲ್ಲಿಸಲುಬಯಸುವ ಅಭ್ಯರ್ಥಿಯು ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಎಂ.ಎ ಸಮಾಜ ಶಾಸ್ತ್ರ ಅಥವಾ ಎಂ.ಎಸ್.ಡಬ್ಲ್ಯೂ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.
2. ಅಭ್ಯರ್ಥಿಯು ಈ ಹಿಂದೆ ಶಾಲಾ ಪೂರ್ವ ಶಿಕ್ಷಣ ಅಥವಾ ಮಕ್ಕಳ ಕಲಿಕೆ ವಿಷಯಕ್ಕೆ ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಠ 3 ರಿಂದ 5 ವರ್ಷ ಸೇವೆ ಸಲ್ಲಿಸಿದ ಅನುಭವ ಹೊಂದಿದವರಾಗಿರತಕ್ಕದ್ದು.
3. ಗಣಕ ಯಂತ್ರದಲ್ಲಿ ಕನ್ನಡ ಮತ್ತು ಇಂಗ್ಲೀಷ್ ತಂತ್ರಾಂಶದಲ್ಲಿ ಕೆಲಸ ಮಾಡುವ ಕೌಶಲ್ಯ ಹೊಂದಿರತಕ್ಕದ್ದು.
4. ಅರ್ಜಿ ಸಲ್ಲಿಸಲುಬಯಸುವ ಅಭ್ಯರ್ಥಿಯು ಹೈದ್ರಬಾದ್ ಕರ್ನಾಟಕ ವ್ಯಾಪ್ತಿಗೆ ಬರುವ ಜಿಲ್ಲೆಯವರಾಗಿರತಕ್ಕದ್ದು.
5. ಜಿಲ್ಲೆಯಾದ್ಯಂತ ಕೆಲಸ ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ಕಾಲ ಕಾಲಕ್ಕೆ ಭೇಟಿ ನೀಡುವ ಆಸಕ್ತಿ ಮತ್ತು ಸಧೃಢ ಮನಸ್ಥಿತಿ ಹೊಂದಿದವರಾಗಿರತಕ್ಕದ್ದು.
6. ಕನ್ನಡ, ಇಂಗ್ಲೀಷ್ ಹಾಗೂ ಸ್ಥಳಿಯ ಭಾಷೆಗಳಲ್ಲಿ ಓದಲು, ಬರೆಯಲು ಮತ್ತು ಮಾತನಾಡುವ ಪ್ರಬುದ್ಧತೆಯನ್ನು ಹೊಂದಿರತಕ್ಕದ್ದು.
7. ವಿವಿಧ ಇಲಾಖಾ ಅಧಿಕಾರಿಗಳೊಂದಿಗೆ ಮತ್ತು ಸಮುದಾಯದೊಂದಿಗೆ ಕಾರ್ಯನಿರ್ವಹಿಸಲು ಉತ್ತಮ ಸಂವಹನ ಕೌಶಲ್ಯವನ್ನು ಹೊಂದಿರತಕ್ಕದ್ದು.
8. ಸದರಿ 1 ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ 3 ವರ್ಷದ ಅವಧಿಗಾಗಿ ತೆಗೆದುಕೊಳ್ಳಲಾಗುವುದಾಗಿದೆ.
9. ಸದರಿ ಹುದ್ದೆಯು ತಾತ್ಕಾಲಿಕವಾಗಿರುವುದರಿಂದ ಯಾವುದೇ ಮುನ್ಸೂಚನೆ ನೀಡದೆ ತೆಗೆದುಹಾಕುವ ಅಧಿಕಾರವು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬಳ್ಳಾರಿ ಇವರಿಗೆ ನೀಡಲಾಗಿದೆ.

### ಗೌರವಧನ ಮತ್ತು ಭತ್ತೆಗಳು :

1. ಜಿಲ್ಲಾ ಸಂಪನ್ಮೂಲ ವ್ಯಕ್ತಿಗೆ ಪ್ರತಿ ಮಾಹೆ ರೂ.25,000/– ಗೌರವಧನವನ್ನು ನೀಡಲಾಗುವುದು.
2. ಜಿಲ್ಲೆಯಾದ್ಯಂತ ಪ್ರವಾಸ ಮಾಡಿದ ಮಾಸಿಕ ಪ್ರಯಾಣ ಭತ್ತೆಯ ಬಿಲ್ಲನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬಳ್ಳಾರಿ ಇವರಿಂದ ಮೇಲು ರುಜುವಿನಿಂದ ಮಂಜೂರಾದ ಭತ್ತೆ ಅಥವಾ ರೂ.5,000/– ಇದರಲ್ಲಿ ಯಾವುದು ಕಡಿಮೆ ಇರುವುದೋ ಅದನ್ನು ನೀಡಲಾಗುವುದು.

ಅರ್ಜಿಗಳನ್ನು ದಿನಾಂಕ :08.07.2019 ರಿಂದ 25.08.2019 ರೊಳಗೆ ಕಛೇರಿ ಕೆಲಸದ ವೇಳೆಯಲ್ಲಿ ಉಪನಿರ್ದೇಶಕರ **ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಳ್ಳಾರಿ. ಎಸ್.ಪಿ ಸರ್ಕಲ್ ಸ್ತ್ರೀಸೇವಾನಿಕೇತನ ಆವರಣ, ಬಳ್ಳಾರಿ** ಇಲ್ಲಿ ನಿಗಧಿಪಡಿಸಿದ ವಿದ್ಯಾರ್ಹತೆ ಪ್ರಮಾಣ ಪತ್ರ ಹಾಗೂ Biodata ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಳ್ಳಾರಿ. ದೂರವಾಣಿ ಸಂಖ್ಯೆ 08392-266219, 9980107025 ಸಂಪರ್ಕಿಸಬಹುದಾಗಿದೆ.

ತಮ್ಮ ವಿಶ್ವಾಸಿ
ಉಪನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬಳ್ಳಾರಿ.